ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ

ದಿನಾಂಕ : DATE : 21/07/2019

# 6 ರಾಜ್ಯಗಳಿಗೆ ಹೊಸ ರಾಜ್ಯಪಾಲರು

ನವದೆಹಲಿ: ಆರು ರಾಜ್ಯಗಳಿಗೆ ನೂತನ ರಾಜ್ಯಪಾಲರ ನಿಯುಕ್ತಿಗೊಳಿಸಿ ರಾಷ್ಟ್ರಪತಿ ರಾಮನಾಥ ಕೋವಿಂದ ಶನಿವಾರ ಆದೇಶ ಹೊರಡಿಸಿದ್ದಾರೆ. ಕೆಲ ರಾಜ್ಯಪಾಲರನ್ನು ಬೇರೆ ರಾಜ್ಯಕ್ಕೆ ನೇಮಿಸಲಾಗಿದೆ. ಮಧ್ಯಪ್ರದೇಶದ ರಾಜ್ಯಪಾಲರಾಗಿದ್ದ ಆನಂದಿಬೆನ್ ಪಟೇಲ್‌ರನ್ನು ಉತ್ತರ ಪ್ರದೇಶಕ್ಕೆ ನೇಮಕ ಮಾಡಲಾಗಿದೆ. ಜಗದೀಪ್ ಧನ್‌ಖಡ್‌ರಿಗೆ ಪಶ್ಚಿಮ ಬಂಗಾಳದ ಜವಾಬ್ದಾರಿ ನೀಡಲಾಗಿದೆ. ಉತ್ತರಪ್ರದೇಶ ರಾಜ್ಯಪಾಲ ರಾಮ ನಾಯ್ಕ್, ಪಶ್ಚಿಮ ಬಂಗಾಳದ ಕೇಸರಿನಾಥ್ ತ್ರಿಪಾಠಿ ಮತ್ತು ನಾಗಾಲ್ಯಾಂಡ್‌ನ ಪದ್ಮನಾಭ ಆಚಾರ್ಯರ ಅಧಿಕಾರಾವಧಿ ಅಂತ್ಯವಾಗಿದೆ.

**ಇಬ್ಬರ ವರ್ಗಾವಣೆ:** ಗುಜರಾತ್‌ನ ಮಾಜಿ ಮುಖ್ಯಮಂತ್ರಿ ಆನಂದಿಬೆನ್ ಪಟೇಲ್ ಸದ್ಯ ಮಧ್ಯಪ್ರದೇಶದ ರಾಜ್ಯಪಾಲೆಯಾಗಿದ್ದು, ಅವರನ್ನು ಉತ್ತರಪ್ರದೇಶಕ್ಕೆ, ಬಿಹಾರ ರಾಜ್ಯಪಾಲ ಲಾಲ್‌ಜಿ ಟಂಡನ್, ಮಧ್ಯಪ್ರದೇಶಕ್ಕೆ ನೇಮಕ ಮಾಡಲಾಗಿದೆ.




» **ಆನಂದಿಬೆನ್‌ಗೆ ಉತ್ತರ ಪ್ರದೇಶದ ಜವಾಬ್ದಾರಿ**

» **ಪಶ್ಚಿಮ ಬಂಗಾಳಕ್ಕೆ ಜಗದೀಪ್ ಧನ್ಕಡ್**

**4 ರಾಜ್ಯಗಳಿಗೆ ನೂತನ ಗವರ್ನರ್:** ಪಶ್ಚಿಮ ಬಂಗಾಳಕ್ಕೆ ಜಗದೀಪ್ ಧನ್ಕಡ್, ತ್ರಿಪುರಾಗೆ ರಮೇಶ್ ಬೈಸ್, ಬಿಹಾರಕ್ಕೆ ಫಗು ಚೌಹಾಣ್ ಮತ್ತು ನಾಗಾಲ್ಯಾಂಡ್‌ಗೆ ಆರ್.ಎನ್. ರವಿಯವರನ್ನು ನಿಯೋಜಿಸಲಾಗಿದೆ.

**ಇನ್ನೂ ಐದು ರಾಜ್ಯಪಾಲರ ನಿವೃತ್ತಿ:** ಮುಂದಿನ ಎರಡು ತಿಂಗಳಲ್ಲಿ ಇನ್ನೂ 5 ರಾಜ್ಯಗಳ ರಾಜ್ಯಪಾಲರು ನಿವೃತ್ತರಾಗಲಿದ್ದಾರೆ. ಮಹಾರಾಷ್ಟ್ರದ ವಿದ್ಯಾಸಾಗರ ರಾವ್ ಆ. 29ಕ್ಕೆ, ಗೋವಾದ ಮೃದುಲಾ ಸಿನ್ಹಾ ಆ.30ಕ್ಕೆ, ಕರ್ನಾಟಕದ ವಜುಭಾಯ್ ವಾಲಾ ಆ. 31ಕ್ಕೆ, ರಾಜಸ್ಥಾನದ ಕಲ್ಯಾಣ್ ಸಿಂಗ್ ಸೆ.3ಕ್ಕೆ ಮತ್ತು ಕೇರಳದ ರಾಜ್ಯಪಾಲ ಪಿ.ಸದಾಶಿವಂ ಸೆ.4ಕ್ಕೆ ನಿವೃತ್ತರಾಗಲಿದ್ದಾರೆ.

9